‘ಈ ಮಾತಿನ ಸೊಗಸನ್ನು ತಿಳಿಯಬೇಕಾದರೆ ನೀವು ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಕುಕ್ಕರಹಳ್ಳಿ ಕೆರೆಯ ಬೇಲಿಯುದ್ದಕ್ಕೂ ಹೂ ಮೊಗ್ಗುಗಳಿಂದ ತುಂಬಿ ತುಳುಕುವ ಹೊಂಗೆ ಮರಗಳ ಸಾಲನ್ನು ನೋಡಬೇಕು’ ಎಂದು ಹೇಳಿದರು. ಆ ಮಾತು ನನ್ನಲ್ಲಿ ನಾಟಿತು. ಅದೇ ಒಂದು ಆಜ್ಞೆಯಂತೆ ಅಂದಿನಿಂದ ಇಂದಿವರೆಗೂ (1981ನೆಯ ಇಸವಿ ಹೊರತು) ಪ್ರತಿ ವರ್ಷ ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಕುಕ್ಕರಹಳ್ಳಿ ಕೆರೆ ಬೇಲಿಯಲ್ಲಿರುವ ಹೂ ತುಂಬಿರುವ ಹೊಂಗೆಮರದ ಸಾಲನ್ನು ನೋಡುತ್ತಾ ಬಂದಿದ್ದೇನೆ. ಆದರೆ, ಈಗ ಮೊದಲಿದ್ದಷ್ಟು ಮರಗಳು ಇಲ್ಲ ಎಂಬುದು ಬೇಸರದ ವಾಸ್ತವಿಕತೆ. ನನ್ನ ಗುರು ವಾಕ್ಯ ಪರಿಪಾಲನೆಯ ಸಂಗತಿಯನ್ನು ಗುರುಗಳಿಗೆ ಒಮ್ಮೆ ತಿಳಿಸಬೇಕೆಂಬ ಅಪೇಕ್ಷೆಯೂ ಇತ್ತು. ಆ ಮನಃಸ್ಥಿತಿ ಏನೆಂಬುದು ನನಗೆ ಇನ್ನೂ ಸರಿಯಾಗಿ ಅರ್ಥವಾಗಿಲ್ಲ. ಇರಲಿ. ಅಂಥ ಒಂದು ಅವಕಾಶ ಒದಗಿ ಬಂದದ್ದು 2007ರಲ್ಲಿ, ಅವರಿಗೆ ರಾಷ್ಟ್ರಕವಿ ಪ್ರಶಸ್ತಿ ಬಂದಾಗ. ಆಗೊಂದು ದಿನ ನಾನು ಮತ್ತು ಕವಿ ಗೆಳೆಯ ಎಸ್.ಜಿ. ಸಿದ್ಧರಾಮಯ್ಯ ಕನ್ನಡ ಪುಸ್ತಕ ಪ್ರಾಧಿಕಾರದ ಪರವಾಗಿ ಅವರನ್ನು ಅಭಿನಂದಿಸಲು ಬೆಂಗಳೂರಿನ ಬನಶಂಕರಿಯಲ್ಲಿರುವ ಅವರ ಮನೆಗೆ ಹೋದೆವು. ಆತ್ಮೀಯ ವಾತಾವರಣದಲ್ಲಿ ಮಾತುಕತೆ ನಡೆಯಿತು. ಮಾತಿನ ನಡುವೆ ನಾನು, ‘ಹೊಂಗೆ ಹೂವಿಂಗೈದ ರಂಗವಲ್ಲಿಯ ತೆರದಿ’ ಸಾಲಿನ ಪ್ರಸಂಗವನ್ನು ಬಹು ಪ್ರೀತಿಯಿಂದಲೇ ಹೇಳಿದೆ. ಅದನ್ನು ಹೇಳುತ್ತಾ ನಾನು ಭಾವುಕನಾದೆನೊ ಇಲ್ಲ ಕೇಳುತ್ತಾ ಗುರುಗಳೆ ಭಾವುಕರಾದರೊ ಗೊತ್ತಿಲ್ಲ. ಪ್ರೀತಿಯಿಂದ ಅವರು ನನ್ನ ಬೆನ್ನು ಸವರಿದರು. ಕೊನೆಗೂ ನನ್ನ ಕಣ್ಣು ತುಂಬಿ ಬಂತು. ಅದು ಕುಕ್ಕರಹಳ್ಳಿ ಕೆರೆ ನೀರಿನೊಂದಿಗೆ ಮಿಳಿತವಾಯಿತು.

1970ರ ದಶಕದ ಮಧ್ಯಭಾಗ. ಕುಕ್ಕರಹಳ್ಳಿಯಲ್ಲಿ ಗ್ರಾಮ ಅಥವಾ ಬಡಾವಣೆಯಲ್ಲಿ ನಾವು ಕೆಲವು ಎಡಪಂಥೀಯ ಚಿಂತಕರು ಒಟ್ಟಾಗಿ ಸೇರಿ, ಒಂದು ಗ್ರಂಥಭಂಡಾರವನ್ನು ಪ್ರಾರಂಭಿಸಿದೆವು. ‘ಮಹದೇವಪ್ಪ ಸ್ಮಾರಕ ಮಾರ್ಕ್ಸ್‌ವಾದಿ ಗ್ರಂಥಾಲಯ’ ಎಂಬ ಹೆಸರಿನ ಗ್ರಂಥಾಲಯ ಆ ಬಡಾವಣೆಗೆ ನೂತನವಾಗಿತ್ತು. ನಗರದ ಅನೇಕ ಪ್ರಗತಿಪರ ಚಿಂತಕರು ಸೇರಿದಂತೆ ಕುಕ್ಕರಹಳ್ಳಿಯ ಹಲಕೆಲವು ಯುವಕರು ಅದರಲ್ಲಿ ಭಾಗವಹಿಸುತ್ತಿದ್ದರು. ವಾಸ್ತವವಾಗಿ ಕುಕ್ಕರಹಳ್ಳಿ ಕೆರೆಗೂ ಕುಕ್ಕರಹಳ್ಳಿಗೂ ಗಾಢ ಸಂಬಂಧ ಇದೆಯೊ ಇಲ್ಲವೊ, ಆದರೆ ಕೆರೆಯೊಂದಿಗಿನ ನನ್ನ ಸಂಬಂಧ ಹೆಚ್ಚಾಯಿತೆಂದೇ ಹೇಳಬಹುದು. ಆ ಹೊತ್ತಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಕಾಯಂ ಉದ್ಯೋಗಿಯಾಗಿದ್ದ ನಾನು ಸಂಜೆ ಹೊತ್ತು ಗ್ರಂಥಾಲಯದಲ್ಲಿ ಎಲ್ಲರೊಂದಿಗೆ ಸೇರುತ್ತಿದ್ದೆ. ಅದೇ ಹೊತ್ತಿನಲ್ಲಿ ಕೆರೆಯ ಸಂಪರ್ಕವೂ ಹೆಚ್ಚತೊಡಗಿತು. ಗ್ರಂಥಾಲಯಕ್ಕೆ ಕಾಯಂ ಆಗಿ ಬರುತ್ತಿದ್ದ ಗಂಗೋತ್ರಿಯ ತತ್ತ್ವಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ಹಾಗೂ ನಮಗೆಲ್ಲರಿಗೂ ನೆಚ್ಚಿನ ಗೆಳೆಯನೂ ಆಗಿದ್ದ, ಈಗ ಪ್ಯಾರಿಸ್ಸಿನ ನಿವಾಸಿಯಾಗಿರುವ ಬಿ. ನರಹರಿರಾವ್ ಮತ್ತು ನಾನು ಎಷ್ಟೋ ಮಧ್ಯರಾತ್ರಿ ಎರಡು ಗಂಟೆಯವರೆಗೂ ಕೆರೆಯ ಬೆಂಚೊಂದರ ಮೇಲೆ ಕುಳಿತು ದೇಶದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳ ಬಗ್ಗೆ ಚರ್ಚೆ ನಡೆಸುತ್ತಿದ್ದೆವು. ಒಂದೆರಡು ಬಾರಿ ಮಧ್ಯರಾತ್ರಿಯಲ್ಲಿ ಕೆರೆಯ ದಂಡೆಯ ಮೇಲೆ ನಡೆದು ಬಂದ, ನಾನು ಉದ್ಯೋಗಿಯಾಗಿದ್ದ ಸಂಸ್ಥೆಯ ನಾಲ್ಕೈದು ಸಹೋದ್ಯೋಗಿಗಳು ನನ್ನನ್ನು ನೋಡಿ ಗಾಬರಿಗೊಂಡರು, ಮಾತ್ರವಲ್ಲ, ‘ರಾತ್ರಿ ಅಷ್ಟೊತ್ತಿನಲ್ಲಿ ಏನಾದ್ರು ಮಾಟ ಮಂತ್ರ ಮಾಡಿಸ್ತಾ ಇದ್ದರೇನ್ರಿ?’ ಅಂತ ಮಾರನೆಯ ದಿನ ಸಹೋದ್ಯೋಗಿಯೊಬ್ಬ ಕೇಳಿಯೂ ಕೇಳಿದ. ಅದು ಕುಚೇಷ್ಟೆಯ ಮಾತೆಂದು ನಾನು ಸುಮ್ಮನಾದೆ. ವಾಸ್ತವವಾಗಿ ಹಿಂದಿನ ರಾತ್ರಿ ಅವರೆಲ್ಲ ಕುಲಪತಿಗಳಾಗಿದ್ದ ದೇ. ಜವರೇಗೌಡ ಅವರ ‘ಕುಲಪತಿ ನಿವಾಸ’ಕ್ಕೆ ಹೋಗಿ ವಾಪಸು ಬರುತ್ತಿದ್ದರು. ಇದೇ ಬಗೆಯ ಇನ್ನೊಂದು ಸಂದರ್ಭ ನನ್ನನ್ನು ಕೊಂಚ ವಿಚಲಿತನನ್ನಾಗಿ ಮಾಡಿತು. ಒಂದು ರಜಾ ದಿನದ ಮಧ್ಯಾಹ್ನದ ಸುಡುಬಿಸಿಲಿನ ಸುಮಾರು ಎರಡುವರೆ ಗಂಟೆ ಹೊತ್ತಿನಲ್ಲಿ ನಾನು ಕೆರೆ ದಂಡೆ ಮೇಲಿನ ಕಲ್ಲು ಬೆಂಚಿನ